ಬೆಂಗಳೂರಿನ ಕನ್ನಡ ಕ್ಯಾಥಲಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ

೧೭೨ ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಂಗಳೂರಿನ ಕನ್ನಡ ಕ್ಯಾಥಲಿಕರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ :

ಆ) ವಿನಾಕಾರಣ ಕನ್ನಡ ಕ್ಯಾಥಲಿಕರ ಮೇಲೆ ಪೋಲೀಸರು ಮೊಕದ್ದಮೆಗಳನ್ನು ಹೂಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಇಲ್ಲ.
ಆ) ಇಲ್ಲ.

ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವ ಬಗ್ಗೆ

೫೩೦ ಶ್ರೀ ರಾಮಲಿಂಗಾರೆಡ್ಡಿ (ಜಯನಗರ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರೆವಿನ್ಯೂ ನಿವೇಶನಗಳನ್ನು ಸರ್ಕಾರದವರು ಸಕ್ರಮಗೊಳಿಸುವರೆ ;

ಆ) ಹಾಗಿದ್ದಲ್ಲಿ ಅವುಗಳನ್ನು ಯಾವಾಗ ಸಕ್ರಮಗೊಳಿಸಲಾಗುವುದು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಕರ್ನಾಟಕ ಭೂ ಕಂದಾಯ ಕಾಯಿದೆ ಸೂಕ್ತ ತಿದ್ದುಪಡಿಯನ್ನು ಮಾಡಿದ ನಂತರ ಸಕ್ರಮಗೊಳಿಸಲಾಗುವುದು.

ನಗರದಲ್ಲಿ ಖಾಸಗಿ ಏಜೆನ್ಸಿಗಳು ಟ್ಯಾಂಕರ್‌ಗಳ ಮೂಲಕ ಕಲ್ಮಶವಾದ ನೀರನ್ನು ಸರಬರಾಜು ಮಾಡುತ್ತಿರುವುದನ್ನು ತಡೆಗಟ್ಟುವ ಬಗ್ಗೆ

೬೫೦. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆಲವು ಖಾಸಗಿ ಏಜೆನ್ಸಿಗಳು ಸಣ್ಣ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರೆಂದು ಹೇಳಿ ಹೋಟೆಲ್‌ಗಳಿಗೆ ಹಾಗೂ ಮನೆಗಳಿಗೆ ಸರಬರಾಜು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ ಇವರುಗಳು ಸರಬರಾಜು ಮಾಡುತ್ತಿರುವ ನೀರು ಶುದ್ಧ ನೀರಾಗಿರದೆ ಕಲುಷಿತ ನೀರಾಗಿದ್ದು ಆ ನೀರನ್ನು ಕುಡಿದು ಸಾಂಕ್ರಾಮಿಕ ರೋಗಗಳು ಬರುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಈ ಖಾಸಗಿ ಏಜನ್ಸಿಗಳು ನೀರು ಸರಬರಾಜು ಮಾಡಲು ಮಹಾನಗರಪಾಲಿಕೆಯ ಅಥವಾ ಜಲಮಂಡಳಿಯು ಅನುಮತಿ ಪಡೆದಿದ್ದಾರೆಯೇ?

ಈ) ಈ ರೀತಿಯ ಕಲುಷಿತ ನೀರು ಪರವಾನಗಿ ಇಲ್ಲದೆ ಸರಬರಾಜನ್ನು ಮಾಡುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಹಾಗಿದ್ದಲ್ಲಿ ಈ ರೀತಿ ಕಲುಷಿತ ನೀರಿನ ಸರಬರಾಜನ್ನು ತಡೆಗಟ್ಟಲು ಬೆಂಗಳೂರು ಜಲಮಂಡಳಿಯು ಸಣ್ಣ ಟ್ಯಾಂಕರುಗಳನ್ನು ಕೊಂಡು ಅದರ ಮೂಲಕ ರಿಯಾಯಿತಿದರದಲ್ಲಿ ಸಾರ್ವಜನಿಕರಿಗೆ ಹಾಗೂ ಹೋಟೆಲ್‌ಗಳಿಗೆ ನೀರು ಸರಬರಾಜು ಮಾಡುವಂತೆ ಕ್ರಮ ಕೈಗೊಳ್ಳುವುದೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು

ಆ) ಪರವಾನಗಿಯನ್ನು ಪಡೆಯದೆ ಖಾಸಗಿ ಸಂಸ್ಥೆಗಳು ನೀರು ಸರಬರಾಜು ಮಾಡುವುದನ್ನು ನಿಷೇಧಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಅಂತಹ ನೀರನ್ನು ಉಪಯೋಗಿಸಬಾರದೆಂದು ದಿನ ಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿದೆ.

ಇ) ಇಲ್ಲ.

ಈ) ಉತ್ತರ (ಆ) ನಲ್ಲಿರುವಂತೆ.

ಉ) ಬೆಂಗಳೂರು ಜಲಮಂಡಳಿಗಳಲ್ಲಿ ಈಗಾಗಲೇ ಸಾಕಷ್ಟು ಲಾರಿಗಳು ಇದ್ದು ಪ್ರತಿಯೊಂದರಲ್ಲಿ ೯೦೦೦ ಲೀಟರ್ ನೀರು ಶೇಕರಣೆ ಸಾಮರ್ಥ್ಯವಿರುತ್ತದೆ. ಇಂತಹ ಲಾರಿಗಳಿಂದ ಜನರಿಗೆ ಹಾಗೂ ಉಪಹಾರ ಮಂದಿರಗಳಿಗೆ ಕೋರಿಕೆ ಮತ್ತು ಹಣ ಸಲ್ಲಿಕೆಯ ಮೇರೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಜಲಮಂಡಳಿಯು ಕಡಿಮೆ ದರದಲ್ಲಿಯೇ ನೀರನ್ನು ಒದಗಿಸುತ್ತಿದೆ ಅಂದರೆ ೯೦೦೦ ಲೀಟರ್ ಕುಡಿಯುವ ನೀರಿಗೆ ರೂ. ೧೭೫-೦೦ನ್ನು ವಿಧಿಸಲಾಗುತ್ತಿದೆ.

ಸಹಕಾರ ಸಂಘಗಳ ಸಂಯೋಜಕ್ತ ನಿಬಂಧಕರ ಹುದ್ದೆಗಳ ಸಂಖ್ಯೆ

೧೦೫೫. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡ ದೇವನ ಕೋಟೆ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾಲಿ ಇರುವ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಹುದ್ದೆಗಳಿಗೆ ಬಡ್ತಿ ನೀಡಲು ಸರ್ಕಾರ ಕೈಕೊಂಡಿರುವ ಕ್ರಮಗಳಾವುವು ;

ಇ) ಈ ಬಡ್ತಿ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿಗೆ ಸೇರಿದವರ ಸಂಖ್ಯೆ ಎಷ್ಟು ;

ಈ) ಈ ಬಡ್ತಿ ಪಟ್ಟಿಯಲ್ಲಿ ಹಿಂದುಳಿದ ಜನಾಂಗದವರ ಸಂಖ್ಯೆ ಎಷ್ಟು?

ಡಾ. ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಅ) ಎರಡು

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಇ) ಮತ್ತು ಈ) ಈ ವ್ಯಾಜ್ಯಕ್ಕೆ ವಿಶೇಷವಾದ ಆದೇಶಗಳು ಅನ್ವಯವಾಗುವುದಿಲ್ಲ.

ಸರ್ಕಾರದ ವಿವಿಧ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು

೧೦೫೬. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ;

(ಆ) ಅವರನ್ನು ಸರ್ಕಾರಿ ನೌಕರರೆಂದು ಯಾವಾಗ ಪರಿಗಣಿಸಲಾಗುವುದು ?

ಶ್ರೀ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಯವರು.—

(ಅ) ಸುಮಾರು ೬೫,೦೦೦ ದಿನಗೂಲಿ ನೌಕರರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಅಂದಾಜು ಮಾಡಲಾಗಿದೆ.

(ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಕ್ರಮಬದ್ಧಗೊಳಿಸುವ ಬಗ್ಗೆ ಸರ್ವೋನ್ನತ ನ್ಯಾಯಾಲಯವು ದಿನಾಂಕ ೨೫-೨-೧೦ರಂದು ಹೊರಡಿಸಿರುವ ಆದೇಶಾನುಸಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ೧-೭-೮೪ರ ಹಿಂದಿನಿಂದ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರಿಗೆ ಅನ್ವಯಿಸಲು ಸರ್ಕಾರವು ನಿರ್ಣಯ ತೆಗೆದುಕೊಂಡಿದೆ. ಸಧ್ಯದಲ್ಲೇ ಆದೇಶ ವನ್ನು ಹೊರಡಿಸಲಾಗುವುದು.